ತರಕಾರಿಗಳೆಲ್ಲ ಪುರುವನ್ನು ಅಣಕಿಸಿದಂತೆನ್ನಿಸುತ್ತಿತ್ತು. ಕುಮಟೆಯಲ್ಲಿ ಶೇಖರನ ನೆನಪು ಹೊತ್ತು ಬದುಕುವುದು ಸಾಧ್ಯವೇ ಇಲ್ಲ ಎನ್ನಿಸಿ ಶೇಖರ ಸತ್ತ ನಾಲ್ಕಾರು ತಿಂಗಳಿಗೆ ಇದೇ ಕೊಂಕಣ ಎಕ್ಸ್‌ಪ್ರೆಸ್ ಹತ್ತಿ ಮುಂಬೈ ಸೇರಿದವ ಇವತ್ತೇ ಕುಮಟೆಗೆ ವಾಪಸ್ಸಾಗಿದ್ದು.

ಪುರು ಮುಂಬೈ ಸೇರಿಬಿಟ್ಟಿದ್ದ ತನ್ನ ಮೈ ಮನಸಿಗೆ ತಾನೇ ಅಂಟಿಸಿಕೊಂಡ ಅಪರಾಧವನ್ನು ತೊಳೆದುಕೊಳ್ಳುವ ನೆಪ ಹೊತ್ತು. ಯಾರೂ ಯಾರನ್ನೂ ಕೊಂದಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ ಆದರೂ ಶೇಖರನನ್ನು ಬದುಕಿಸುವ ಅವಕಾಶವಿತ್ತೆಂಬುದು ಪುರುವಿಗೂ ಮತ್ತು ಶೇಖರನಿಗೂ ಮಾತ್ರ ಗೊತ್ತಿದ್ದ ಸತ್ಯ. ಸತ್ತವ ಸಾಕ್ಷಿ ನುಡಿಯಲಿಕ್ಕಿಲ್ಲ. ಬದುಕಿರುವ ಪುರುವಿಗೆ ಅಪರಾಧಿ ಎನ್ನಿಸಿಕೊಳ್ಳಲು ಸಾಕ್ಷಿಯ ಬಿಸಾತಿಲ್ಲ.

ಇತ್ತ ಇದ್ದೊಬ್ಬ ಮಗನನ್ನು ಕಳೆದುಕೊಂಡ ಮಾಮಾ ಮಾಮಿ ಹೇಗಿದ್ದಿರಬೇಡ... ಶೇಖರನ ಸಾವಿನ ನಂತರ ಸಂಬಂಧಿಕರೋ, ಸಚೂಟಿ ಇದ್ದವರೋ ಯಾರೊಂದಿಗೂ ಮಾತಿಲ್ಲ, ಒಡನಾಟವಿಲ್ಲ. ದಿನದಲ್ಲೊಮ್ಮೆಯೂ ತಮ್ಮ ಮನೆಯಿಂದ ಮಾಮಾ ಹೊರಗೆ ಬೀಳುತ್ತಿದ್ದಿಲ್ಲ. ಮಾಮಿಯ ಅಡುಗೆ ಮನೆಯಿಂದ ಒಂಗಡೆ ಸುಟ್ಟ ವಾಸನೆಯಿಲ್ಲ. ಶೇಖರನ ಮನೆ ಒಂದು ಲೆಕ್ಕದಲ್ಲಿ ಹೇಳಬೇಕೆಂದರೆ ಗವಿಯಂತೆಯೇ ಭಾಸವಾಗುತ್ತಿದ್ದಿತ್ತು. ಇಷ್ಟು ವರ್ಷದಲ್ಲಿ ಚೌತಿ ಹಬ್ಬವನ್ನು ಒಮ್ಮೆಯಾದರೂ ಆಚರಿಸಿದ್ದಾರೋ ಇಲ್ಲವೋ!!

ಸತ್ಯವೇನೆಂದರಿಯದ ಇವರೆಲ್ಲರಿಗೂ ತಾನಿನ್ನೂ ಸಂಭಾವಿತನೇ ಎಂದು ತನ್ನನ್ನೇ ತಾನು ಮನಸ್ಸಿನಲ್ಲಿ ಹಳಿದುಕೊಂಡು ಸುಮನಳೊಂದಿಗೆ ಮಾತಿಗೂ ನಿಲ್ಲದೆ ಪುರು ತನ್ನ ಮನೆಯೊಳಗೆ ಹೊಕ್ಕ.

ದಾದಾ, ಅಮ್ಮ ಇಬ್ಬರೂ ಏನೇನೋ ಹೇಳಬೇಕೆಂಬ ತವಕವನ್ನೆಲ್ಲ ಅದುಮಿಟ್ಟುಕೊಂಡು ಊಟಕ್ಕೆ ಬಟ್ಟಲು ಜೋಡಿಸಿ ಸಂಭ್ರಮದಿಂದ ಕಾಯುತ್ತಿದ್ದಂತಿತ್ತು. ನೀರೇ ಕಾಣದ ಬಟ್ಟೆಗಳನ್ನು ತುಂಬಿಸಿದ್ದ ಬ್ಯಾಗು, ಸೂಟ್‌ಕೇಸನ್ನು ಬದಿಗಿಟ್ಟು, ಕೈ ಕಾಲಿಗೆ ನೀರು ತಾಗಿಸಿ ಊಟಕ್ಕೆ ಬಂದ ಪುರು.

ಉಭಯ ಕುಶಲೋಪರಿ ಮುಗಿದು ಮುಂದೇನು ಮಾತನಾಡುವುದೆಂದು ತಿಳಿಯದೆ ಮೂವರೂ ಊಟವನ್ನಷ್ಟೇ ಮಾಡತೊಡಗಿದರು.

ಆದರೂ ತಡೆಯಲಾಗದೆ, ಶೇಖರನ ಸುದ್ದಿ ತೆಗೆಯಲೇ ಬಾರದು ಎಂದುಕೊಂಡಿದ್ದರೂ ಅವರಿಂದಲೇ ಸುದ್ದಿ ಸಂಗ್ರಹವನ್ನು ಹೊರತೆಗೆಯಬೇಕಾದ ಅನಿವಾರ್ಯತೆ.

'ಅದಾಗಲೇ ಸಾಲ ಸೋಲ ಮಾಡಿ ಕಂಗೆಟ್ಟಿದ್ದ ಗಂಗಾಧರ, ಮಗನ ಸಾವಿನಿಂದ ಕುಗ್ಗಿಯೇ ಹೋದ. ಊಟ ಉಂಡರೆ ಉಂಟು, ಇಲ್ಲದಿದ್ದರೆ ಇಲ್ಲ. ಎಷ್ಟೋ ಬಾರಿ ಅವರ ಮನೆಯಲ್ಲಿ ಅಡುಗೆಯನ್ನೇ ಮಾಡುತ್ತಿರಲಿಲ್ಲ. ಅವನಮ್ಮನಂತೂ ಉಪ್ಪಿನಕಾಯಿ ವ್ಯಾಪಾರ, ಹಪ್ಪಳ ಸಂಡಿಗೆ ವ್ಯಾಪಾರ ಬಿಟ್ಟು ಚಿಂತಿಸುತ್ತಲೇ ಕುಳಿತಳು. ಮನೆ, ಜಾಗವನ್ನೆಲ್ಲ ಅಡವಿಟ್ಟು ಸಾಲ ಮಾಡಿದ್ದರಂತೆ. ಈಗ ಲೀಲಾವಿಗೆ ಬಂದಿದೆ. ಮನೆ ಹಿತ್ತಲು ಹರಾಜಾಗಿ ಯಾರ್‌ಯಾರಿಗೋ ಹೋಗುವುದಕ್ಕಿಂತ ಗಂಗಾಧರನ ಸಾಲ ತೀರಿಸಿ ನಾನೇ ನಿನ್ನ ಹೆಸರಿನಲ್ಲಿ ಗಂಗಾಧರನ ಮನೆಯನ್ನು ಕೊಂಡುಕೊಳ್ಳಬೇಕೆಂದುಕೊಂಡಿದ್ದೇನೆ. ನಿನಗೂ ಶೇಖರನ ಮನೆ ಬೇರೆಯವರಿಗೆ ಸೇರಿತು ಎಂಬ ಕೊರಗಿರದು ನೋಡು' ಎಂದು ದಾದಾ ಆಡಿದ ಮಾತಿನ ಕೊನೆಯ ಸಾಲು ತನ್ನನ್ನು ಒಪ್ಪಿಸಲಿಕ್ಕೇ ಎಂದು ಗೊತ್ತೇ ಇತ್ತು ಪುರುಗೆ.

ದಾದಾ ಇನ್ನೂ ಮಾತು ಮುಗಿಸಿದಂತೆ ಕಾಣಿಸಲಿಲ್ಲ. ಗಂಟಲಲ್ಲೇನೋ ಸಿಕ್ಕಿಕೊಂಡಂತೆ ಗಟ ಗಟ ನೀರು ಕುಡಿಯುತ್ತ, 'ಶೇಖರನ ನೋವಲ್ಲಿ ದಿನ ಕಳೆಯುತ್ತಿರುವವರಿಗೆ ಸುಮನನಿಗೆ ಮದುವೆ ವಯಸ್ಸು ಮೀರಿದ್ದು ಗಮನಕ್ಕೆ ಬರಲಿಲ್ಲವೋ ಅಥವಾ ಮದುವೆ ಮಾಡುವಷ್ಟು ಉಮೇದಿಯಿರಲಿಲ್ಲವೋ. ಈಗ ಯಾವ ಜಾಗವೂ ಸುಮನನಿಗೆ ಆಗಿ ಬರುತ್ತಿಲ್ಲ. ಜಾತಿ ಗೀತಿ ನೋಡದೆ ಪುರುವಿಗೆ ಮಾಡಿಕೊಳ್ಳಿ ಅಂತ